೧೮-೬-೧೯೬೭ ಈ ಎರಡು ಸಲ ಮನವಿಯನ್ನು ಅರ್ಪಿಸಿದ್ದಾರೆ. ಸದರಿ ವೇಳೆಯಲ್ಲಿ ಅಂದರೆ ತಾರೀಖು ೨೦-೬-೧೯೬೭ ರಂದು ಸನ್ಮಾನ್ಯ ಶ್ರೀ ಎಸ್. ಆರ್. ಬೊಮ್ಮಾಯಿ ಕಂದಾಯ ಸಚಿವರು ಇದರಿಂದ ಪತ್ರ ನಂಬರ್ ೫೧೯-೬೭ ಪ್ರಕಾರ ಪರಿಹಾರ ಧನದ ಪಾರ್ಟಿ ಪೇಮೆಂಟ್ ಮಾಡಲು ಅಡ್ಡಿಯಿಲ್ಲಾ ಅಂತಾ ಶಿಫಾರಸ್ಸು ಮಾಡಿದರು. ಆದರೆ ಪತ್ರ ನಂಬರ್ ಅಸಪ ಸಂ. ಲೋ ೧ ಶಿಶಿ ಎಕ್ಕೆ ೬೯೭೭ ಪ್ರಕಾರ ತಾರೀಖು ೩೧-೮-೧೯೬೭ ರಂದು ಯು ಕೆ ಪಿ ಪ್ರಕಾರ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡ ಇವರ ಅಂದರೆ ಸೆಕ್ರಟರಿ ಬಿ. ವೆಂಕಟರಾಮನ್ ಇವರಿಂದ ೧೯-೧೧ರ ವರೆಗೆ ಪರಿಹಾರ ಧನ ಕೊಡಲು ಬರುವುದಿಲ್ಲಾ ಎಂದೇ ತಿಳಿದೂ ಬಂದಿರುತ್ತದೆ.

ಈ ರೀತಿ ಕೋಲಾರ ಗ್ರಾಮವನ್ನು ಸದರಿ ಯೋಜನೆಯಲ್ಲಿ ಮುಳುಗಡೆ ಮಾಡುವುದಾಗಿ ಪರಿಪತ್ರ ಹೊರಡಿಸಿ ಜಾರಿಗೊಳಿಸಿ ಏಕಾಏಕಿ ಈಗ ಪರಿಹಾರ ಧನ ಕೊಡಲು ಬರುವುದಿಲ್ಲಾ ಎಂದು ತಿಳಿಸಿರುವುದರ ಈ ವಿಚಿತ್ರ ನೀತಿಯಿಂದ ಅಲ್ಲಿಯ ಜನರೆಲ್ಲರಿಗೆ ದಿಗ್ಭ್ರಮೆ ಆಗಿರುತ್ತದೆ ಇಲ್ಲಿ ಬಹುತೇಕ ಎಲ್ಲಾ ಜನ ಸತತವಾಗಿ ೩-೪ ವರ್ಷಗಳಿಂದ ಬರಗಾಲದಲ್ಲಿ ಬಿದ್ದ ಮೂಲಕ ಹೇಗಿದ್ದರೂ ಒಂದೇ ವರ್ಷದಲ್ಲಿ ಪರಿಹಾರ ಧನ ಸಿಗುತ್ತದೆ ಎಂದು ನಂಬಿಕೆಯಿಂದ ದನಗಳಿಗೆ ಮೇವು ಮತ್ತು ಜೀವನೋಪಾಯಕ್ಕೆ ಕಾಳು ಕಡ್ಡಿ ಸಲುವಾಗಿ ಬಹಳಷ್ಟು ಬ್ಯಾಂಕ್‌ಗಳಿಂದ ೧೯೬೨-೬೪ ರಿಂದ ಸಾಲವನ್ನು ಪಡೆದಿರುತ್ತಾರೆ. ಸದರಿ ಸಾಲದ ಹಣ ಬಡ್ಡಿ ಸಮೇತ ಎಂಡರಷ್ಟು ಆಗಿರುತ್ತದೆ. ವಾಸ್ತವ ಸ್ಥಿತಿ ಈ ರೀತಿ ಇದ್ದಾಗ ಸದರಿ ಪರಿಹಾರ ಧನ ಕೊಡದೆ ಹೋದರೆ ನಮ್ಮ ಗ್ರಾಮದ ಎಲ್ಲಾ ಜನತೆಯನ್ನು ಜೀವಂತ ಗಲ್ಲಿಗೇರಿಸಿದಂತೆ ಸರ್ಕಾರವೇ ಕಾಣಿತು ಈ ರೀತಿ ತಪ್ಪು ತಿಳಿವಳಿಕೆ ಮಾಡಿ ಮೋಸ ಮಾಡುವುದು, ಬೇರೆಯವರ ಸಲುವಾಗಿ ನಮ್ಮ ಭೂಮಿ ಹಾಗೂ ಮನೆಗಳನ್ನು ಕಳೆದುಕೊಳ್ಳುತ್ತಿರುವ ನಮಗೆ ಸರ್ಕಾರವು ಕೊಡುವ ಬಹುಮಾನವೆ? ದಯಮಾಡಿ ಈ ಕೂಡಲೇ ಸದರಿ ಪರಿಹಾರ ಧನವನ್ನು ಕೊಡುವ ಆಜ್ಞೆಯನ್ನು ಸರ್ಕಾರ ಮಾಡಬೇಕೆಂದು ಈ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಸಂಬಂಧ ಪಟ್ಟವರನ್ನೆಲ್ಲ ಭೇಟಿ ಮಾಡಿದ್ದೆ ಮತ್ತು ಮಾನ್ಯ ನಂಜಯ್ಯನಮಠ್‌ರವರು ಕೂಡ ಬಂದಿದ್ದರು. ಆದ್ದರಿಂದ ಇದನ್ನು ನಾನು ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ.

22. ತರೀಕೆರೆ ತಾಲ್ಲೂಕು ಹಾದಿತಾರೆ ಗ್ರಾಮದ ಮರುಳಂ ಸಿದ್ದಪ್ಪ ಎನ್ನುವವರ ಅಡಿಕೆ ತೋಟ ನಾಶವಾಗಿರುವುದರ ಬಗ್ಗೆ

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕು ಹಾದಿಗೆರೆಗ್ರಾಮದ ಶ್ರೀ ಮರುಳಂಸಿದ್ದಪ್ಪ ಎಂಬುವವರ ಅಡಿಕೆ ತೋಟವನ್ನು ಪಡೆದಿರುತ್ತಾರೆ ಮತ್ತು ನಾಶ ಮಾಡಿರುತ್ತಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಅವರ ಕಷ್ಟದ ಬಗ್ಗೆ ಸರ್ಕಾರ ಗಮನ ಹರಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ. ಅಧ್ಯಕ್ಷರೇ, ದಿನಾಂಕ ೪-೮-೧೯೬೭ ರಂದು ಶ್ರೀ ಹೆಚ್. ಎನ್. ಮರುಳುಸಿದ್ದಪ್ಪನವರು ತರೀಕೆರೆ ಪೋಲೀಸ್ ಠಾಣೆಯಲ್ಲಿ ೩/೩-೪-೬೭ರ ರಾತ್ರಿ ಕೆಲವು ದುಷ್ಕರ್ಮಿಗಳು ದುರುದ್ದೇಶದಿಂದ ಸರ್ವೆ ಸಂಖ್ಯೆ ೨೬-೨ ಮಲ್ಲೇನಹಳ್ಳಿ ಗ್ರಾಮದಲ್ಲಿರುವ ೨ ಎಕರೆ ಅಡಿಕೆ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ ನಾಲ್ಕು ವರ್ಷಗಳ ವಯಸ್ಸಾಗಿರುವ ೫೨೦ ಅಡಿಕೆ ಮರಗಳನ್ನು ಕತ್ತರಿಸಿ ತಮಗೆ ೧೦,೦೦೦ ರೂಪಾಯಿಗಳಷ್ಟು ಹಾನಿ ಉಂಟು ಮಾಡಿದ್ದಾರೆಂದು ಕೊಟ್ಟ ವರದಿಯ ಮೇಲೆ ತರೀಕೆರೆ ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ ೮೨-೬೭ ಕಲಂ ೪೪೭, ೪೨೭ ಐಪಿಸಿ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಲಾಯಿತು. ಪಿರ್ಯಾದಿ ೧) ವೀಸೆ ಬಸಣ್ಣ, ೨) ಪಟೇಲ್ ವೀರಭದ್ರಪ್ಪ, ೩) ತಾಗುಣ್ಣನವರ ಮಹೇಶ್ವರಪ್ಪ ಮತ್ತು ೪) ರೇವಣ್ಣನವರ ಗಂಗಪ್ಪನವರ ಮಗ ಹಾಲಪ್ಪನವರ ಮೇಲೆ ಅನುಮಾನ ವ್ಯಕ್ತಪಡಿಸಿದರು. ಅವರನ್ನು ಬಂಧಿಸಿ ಪರಿಪ್ರಶ್ನೆ ಮಾಡಿ ಅವರ ವಿರುದ್ಧ ಸಾಕ್ಷ್ಯ ಇಲ್ಲದಿದ್ದುದರಿಂದ ಕಲಂ ೧೬೯ ಸಿ.ಆರ್.ಪಿ.ಸಿ. ಪ್ರಕಾರ ದಿನಾಂಕ ೧೧-೮-೬೭ ರಂದು ಬಿಡುಗಡೆ ಮಾಡಲಾಯಿತು. ಇನ್ನೂ ನಾಲ್ಕು ಗುಮಾನಿ ವ್ಯಕ್ತಿಗಳನ್ನು ಅದೇ ರೀತಿ ಬಂದಿಸಿ ಪರಿಪ್ರಶ್ನೆ ಮಾಡಿ ಬಿಡುಗಡೆ ಮಾಡಲಾಯಿತು, ತನಿಖೆ ಮುಂದುವರಿಯುತ್ತಿವೆ. ಈ ಅಪರಾಧವನ್ನು ಪತ್ತೆ

ಹಚ್ಚಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಹಾದಿಕೆರೆ ಗ್ರಾಮದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಪೋಲೀಸರು ಹಳ್ಳಿಯನ್ನು ಭೇಟಿ ಮಾಡುತ್ತಿದ್ದಾರೆ. ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಮತ್ತು ಪೋಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟಿನವರು ಸ್ಥಳಗಳನ್ನು ಪರಿಶೀಲಿಸುವರು? ಈ ಗುನ್ನೆಯಲ್ಲಿ ಈಗ ತರೀಕೆರೆ ಡೆಪ್ಯೂಟಿ ಸೂಪರಿಂಟೆಂಡೆಂಟ್‌ರವರು ಬಿಂದ್ದು ತನಿಖೆಗಾಗಿ ತೆಗೆದುಕೊಂಡಿದ್ದು, ಪತ್ತೆ ಮಾಡಲು ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದಾರೆ.

23. ಅನಿಲ ಸ್ಫೋಟ ಪ್ರಕರಣದಲ್ಲಿ ಎಚ್. ಕೆ. ನಾರಾಯಣ ಎನ್ನುವವರ ಮನೆ ನಾಶವಾಗಿದ್ದು ಅವರಿಗೆ ಸೂಕ್ತ ನೆರವು ನೀಡುವ ಬಗ್ಗೆ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಇತ್ತೀಚೆಗೆ ನಡೆದ ಅಡಿಗೆ ಅನಿಲ ಸ್ಫೋಟ ಪ್ರಕರಣದಲ್ಲಿ ತೀವ್ರ ಗಾಯಗಳಾಗಿ ಆಸ್ಪತ್ರೆಯಲ್ಲಿರುವ ಆಕಾಶವಾಣಿ ಸಂಗೀತ ಕಲಾವಿದರಾದ ಶ್ರೀ ಎಚ್ ಕೆ. ನಾರಾಯಣರವರ ಮನೆಯಲ್ಲಿರುವ ಎಲ್ಲಾ ವಸ್ತುಗಳು, ನಾಶವಾಗಿದ್ದು, ಒಂದು ಮಗುವು ತೀರಿ ಹೋಗಿರುತ್ತದೆ. ಔಷಧೋಪಚಾರಕ್ಕಾಗಲೀ ಅಥವಾ ಚಿಕಿತ್ಸೆಗೂ ಸಹ ಹಣಕಾಸು ಇಲ್ಲದಿರುವ ದುಃಖ್ಖಿತಿಯಲ್ಲಿರುವುದರಿಂದ ಶ್ರೀ ಹೆಚ್. ಕೆ. ನಾರಾಯಣರವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಾಗಲೀ ಅಥವಾ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಾಗಲೀ ಸೂಕ್ತ ನೆರವು ನೀಡಬೇಕಾಗಿ ಸರಕಾರಕ್ಕೆ ಕಳಕಳಿಯ ಮನವಿ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ನಾನೂ ಮುಖ್ಯ ಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ವಿಜಯಾರಾವ್‌ರವರು ಈ ದುರ್ಘಟನೆಯ ಬಗ್ಗೆ ನನಗೆ ಪತ್ರ ಬರೆದು ಶ್ರೀ ಎಚ್. ಕೆ. ನಾರಾಯಣರವರಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಸೂಕ್ತ ಪರಿಹಾರ ನೀಡಬೇಕೆಂದು ಕೋರಿದ್ದರು. ಅಂತೆಯೇ ಸದರಿಯವರ ವೈದ್ಯಕೀಯ ಶುಶ್ರೂಷೆಗಾಗಿ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ೧೦,೦೦೦ ರೂ. ಗಳನ್ನು ಮಂಜೂರು ಮಾಡಲಾಗಿದೆ.

24. ಗಂಗಾವತಿ ಸಕ್ಕರೆ ಕಾರ್ಖಾನೆಯ ಪುನರಾರಂಭ ಹಾಗೂ ಕಾರ್ಮಿಕರ ವೇತನ ಪಾವತಿಯ ಬೇಡಿಕೆಗಳನ್ನು ಈಡೇರಿಸುವುದರ ಬಗ್ಗೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ. ಗಂಗಾವತಿ ಸಕ್ಕರೆ ಕಾರ್ಖಾನೆಯ ಪುನರಾರಂಭ ಹಾಗೂ ಅವರ ವೇತನ ಪಾವತಿಯ ಬೇಡಿಕೆಗಳನ್ನು ಮಂಡಿಸಿ ಕಾರ್ಮಿಕರು ೧೮-೫-೧೯೮೭ ರಿಂದ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ಸತ್ಯಾಗ್ರಹ ಪ್ರಾರಂಭವಾಗಿ ೧೧ ದಿನಗಳಾಗಿದ್ದರೂ ಅವರ ಬೇಡಿಕೆಗಳನ್ನು ಈಡೇರಿಸದಿರುವುದು ವಿಷಾದಕರ. ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಅವರು ಬೇರೆ ದಾರಿ ಕಾಣದೆ ಅನಿವಾರ್ಯವಾಗಿ ದಿನಾಂಕ ೨೩-೯-೮೭ ರಿಂದ ಶಾಂತಿಯುತವಾಗಿ ಸಾಮೂಹಿಕ ಆಮರಣಾಂತರ ಅನ್ನ ಸತ್ಯಾಗ್ರಹ ಆರಂಭಿಸಿದ್ದಾರೆ. ಇದರಿಂದ ಉಂಟಾಗುವ ಯಾವುದೇ ಅಹಿತಕರ ಘಟನೆಗಳಿಗೆ ನೇರವಾಗಿ ಸರ್ಕಾರವೇ ಹೊಣೆಯಾಗಬೇಕಾಗುವುದೆಂದು ಈ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ ಮತ್ತು ಅವರ ಬೇಡಿಕೆಯನ್ನು ಕೂಡಲೇ ಈಡೇರಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ಸದರಿ ಕಾರ್ಖಾನೆಯಲ್ಲಿ ೨೮೧ ಜನ ಕಾರ್ಮಿಕರಿದ್ದು, ಅವರಿಗೆ ಡಿಸೆಂಬರ್, ೧೯೮೫ ರಿಂದ ಮೇ ೧೯೮೭ರ ವರೆವಿಗೆ ಭಾಗಶಃ ವೇತನ ಪಾವತಿ ಆಗಿದ್ದು ಈ ಅವಧಿಯಲ್ಲಿ ಒಟ್ಟಾರೆ ಇನ್ನೂ ರೂ. ೨೦,೫೯,೫೬೭-೦೦ (ಇಪ್ಪತ್ತು ಲಕ್ಷ ಐವತ್ತೊಂಬತ್ತು ಸಾವಿರ ಐದುನೂರು ಅರವತ್ತೇಳು ರೂಪಾಯಿಗಳು) ಸಂದಾಯ ಆಗಬೇಕಾಗಿದೆ. ಬರಬೇಕಾದ ಬಾಕಿ ವೇತನದ ಬಗ್ಗೆ ಮಜೂರಿ ಸಂದಾಯ ಕಾಯ್ದೆ ಕೆಳಗೆ ಚೀಫ್ ಜ್ಯೂಡಿಶಿಯಲ್ ಮ್ಯಾಜಿಸ್ಟ್ರೇಟ್, ರಾಯಚೂರು, ಅವರ ಮುಂದೆ ಅರ್ಜಿ ಸಲ್ಲಿಸಲಾಗಿದೆ.ಇದಕ್ಕೆ ಶ್ರೀ ಎನ್. ಎನ್. ಕೃಷ್ಣಮೂರ್ತಿ ಚೀಫ್ ಎಕ್ಸಿಕ್ಯೂಟಿವ್